ಸಂಯುಕ್ತ ಕರ್ನಾಟಕ

# Sunday 13th January 2019

# RVCE Professor Mrs. Shaila is the first in national youth scientist Competition

## ರಾಷ್ಟ್ರೀಯ ಯುವ ವಿಜ್ಞಾನಿ ಸ್ಪರ್ಧೆ ಶೈಲಾ ಪ್ರಥಮ



**ಸಂ.ಕ.ಸಮಾಚಾರ, ಹುಬ್ಬಳ್ಳಿ:** ಹುಬ್ಬಳ್ಳಿಯ ಶೈಲಾ ಹನುಮಂತ ಕೊಪ್ಪದ ಅವರು ರಾಷ್ಟ್ರ ಮಟ್ಟದ 'ಯುವ ವಿಜ್ಞಾನಿ' ಸ್ಪರ್ಧೆಯಲ್ಲಿ ದೇಶಕ್ಕೇ ಮೊದಲ ಸ್ಥಾನ ಪಡೆದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದ್ದ ಈ ಮೂರು ದಿನಗಳ ಸ್ಪರ್ಧೆಯನ್ನು ಭಾರತೀಯ ವಿಜ್ಞಾನ ಸಂಘಟನೆಯು ಪಂಜಾಬ್‌ನ ಜಲಂಧರ್ ವೃತ್ತಿಪರ ವಿಶ್ವವಿದ್ಯಾಲಯ ಹಮ್ಮಿಕೊಂಡಿತ್ತು.

ಪ್ರಸ್ತುತ ಬೆಂಗಳೂರಿನ ಆರ್. ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿಯಾಗಿರುವ ಶೈಲಾ ಕೊಪ್ಪದ ಅವರು ಸಂಶೋಧನಾತ್ಮಕ ತಾಂತ್ರಿಕ ಪ್ರಬಂಧ ಮಂಡಿಸಿ ಮೊದಲ ಸ್ಥಾನ ಪಡೆದರು. ಅವರಿಗೆ 25 ಸಾವಿರ ರೂಪಾಯಿ ನಗದು ಬಹುಮಾನ ಮತ್ತು ಪ್ರಮಾಣ ಪತ್ರದೊಂದಿಗೆ ವಿಶ್ವವಿದ್ಯಾಲಯ ಈಚೆಗೆ ಸನ್ಮಾನಿಸಿತು.

ಹುಬ್ಬಳ್ಳಿ ಬಸವೇಶ್ವರನಗರ ನಿವಾಸಿಯಾದ ಸಾರಿಗೆ ಸಂಸ್ಥೆ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಹನಮಂತ ಕೊಪ್ಪದ ಅವರ ಪುತ್ರಿಯಾದ ಶೈಲಾ ಅವರನ್ನು ಬಿ.ಎಲ್.ಕುರುಬೇಟ ಮತ್ತು ಗೆಳೆಯರ ಬಳಗ ಹಾಗೂ ಇತರ ಅನೇಕರು ಅಭಿನಂದಿಸಿದ್ದಾರೆ.

ಸಂಯುಕ್ತ ಕರ್ನಾಟಕ Sun, 13 Janu
epaper.samyu